ವರ್ಷದ ವ್ಯಾಸಂಗದ ಅವಧಿಯನ್ನು ಎರಡು ವರ್ಷಕ್ಕೆ ವಿಸ್ತರಿಸಲಾಗಿದೆ. ಅದರಂತೆ ರಾಜ್ಯ ಸರ್ಕಾರವು ಎನ್.ಸಿ.ಟಿ.ಇ. ನಿಯಮಾವಳಿ 2014ರಂತೆ ಬಿ.ಇಡಿ ವ್ಯಾಸಂಗವನ್ನು ಎರಡು ವರ್ಷಕ್ಕೆ ವಿಸ್ತರಿಸುವಂತೆ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ನಿರ್ದೇಶನ ನೀಡಿ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಪ್ರಾರಂಭಿಸಲು ಸೂಚಿಸಲಾಗಿದೆ.

ಅಧ್ಯಕ್ಷರು: ಶ್ರೀ ಶಿವಾನಂದ ಎಸ್.. ಪಾಟೀಲ್ ಕೇಳಿ.

(ಗೊಂದಲ)

6. **ವಿಷಯ: ಬಸವನಬಾಗೇವಾಡಿ ಕ್ಷೇತ್ರದಲ್ಲಿ 2013–14 ಮತ್ತು 2014–15ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ 4702 ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಗಳಡಿಯಲ್ಲಿ ಕೊಳವೆ ಬಾವಿಗಳ ಮೂಲಕ ನೀರಿನ ಸೌಲಭ್ಯ ಕಲ್ಪಿಸುವುದಕ್ಕಾಗಿ ಆಯ್ಕೆ ಮಾಡಲಾದ ಫಲಾನುಭವಿಗಳಿಗೆ ಇದುವರೆಗೆ ಕೊಳವೆ ಬಾವಿಗಳನ್ನು ಕೊರೆದು ನೀರಿನ ಸೌಲಭ್ಯ ಕಲ್ಪಿಸದಿರುವ ಬಗ್ಗೆ.**

ಅಧ್ಯಕ್ಷರು: ಮಾನ್ಯ ಶಿವಾನಂದ ಎಸ್. ಪಾಟೀಲ್‌ರವರಿಗೆ ಉತ್ತರವನ್ನು ಕಳುಹಿಸಿಕೊಡಿ.

(ಗೊಂದಲ)

ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು): 2013–14ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಒಟ್ಟು 17 ಕಾಮಗಾರಿಗಳು ರೂ. 140.00 ಲಕ್ಷಗಳಿಗೆ ಅನುಮೋದನೆಯಾಗಿದ್ದು, ಎಲ್ಲ ಕಾಮಗಾರಿಗಳಿಗೆ ಬೊರ್‌ವೆಲ್ ಕೊರೆಯಲಾಗಿದೆ. ಈ ಪೈಕಿ 13 ಕಾಮಗಾರಿಗಳಿಗೆ ಸೋಲಾರ ಪಂಪ ಅಳವಡಿಸಿ 22.07 ಹೆಕ್ಟೇರ್‌ಗಳ ಕ್ಷೇತ್ರದ 13 ಫಲಾನುಭವಿಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಬಾಕಿ 4 ಕಾಮಗಾರಿಗಳಿಗೆ ಸೌರಶಕ್ತಿ ಪಂಪ ಅಳವಡಿಸಲು ಶಕ್ಯತೆಯಿಲ್ಲದ ಕಾರಣ ಬದಲಾಗಿ ವಿದ್ಯುತ್ ಸಂಪರ್ಕ ಅಳವಡಿಸಲಾಗುತ್ತಿರುವುದರಿಂದ

ಕಾಮಗಾರಿಗಳು ವಿಳಂಬವಾಗಿರುತ್ತವೆ. ಬಾಕಿ ಕಾಮಗಾರಿಗಳನ್ನು ಮಾರ್ಚ್–2016ರೊಳಗಾಗಿ ಪೂರ್ಣಗೊಳಿಸಲಾಗುವುದು.

2013–14ನೇ ಸಾಲಿನಲ್ಲಿ ಗಿರಿಜನ ಉಪ ಯೋಜನೆಯಡಿಯಲ್ಲಿ ಒಟ್ಟು 3 ಕಾಮಗಾರಿಗಳು ರೂ. 35.00 ಲಕ್ಷಗಳೀಗೆ ಅನುಮೋದನೆಯಾಗಿದ್ದು, ಎಲ್ಲ ಕಾಮಗಾರಿಗಳಿಗೆ ಬೊರವೆಲ್ ಕೊರೆಯಲಾಗಿದೆ. ಈ ಪೈಕಿ 1 ಕಾಮಗಾರಿಗೆ ಸೋಲಾರ ಪಂಪ ಅಳವಡಿಸಿ 1.62 ಹೇಕ್ಟೆರ್‌ಗಳ ಕ್ಷೇತ್ರದ 1 ಫಲಾನುಭವಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಬಾಕಿ 2 ಕಾಮಗಾರಿಗಳಿಗೆ ಸೌರಶಕ್ತಿ ಪಂಪ ಅಳವಡಿಸಲು ಶಕ್ಯತೆಯಿಲ್ಲದ ಕಾರಣ ಬದಲಾಗಿ ವಿದ್ಯುತ್ ಸಂಪರ್ಕ ಅಳವಡಿಸಲಾಗುತ್ತಿರುವುದರಿಂದ ಕಾಮಗಾರಿಗಳು ವಿಳಂಬವಾಗಿರುತ್ತವೆ. ಬಾಕಿ ಕಾಮಗಾರಿಗಳನ್ನು ಮಾರ್ಚ್–2016ರೊಳಗಾಗಿ ಪೂರ್ಣಗೊಳಿಸಲಾಗುವುದು.

2014–15ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆಯಡಿಯಲ್ಲಿನ ಕಾಮಗಾರಿಗಳಿಗೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ರಾಜ್ಯ ಪರಿಷತ್ತಿನಿಂದ ಅನುಮೋದನೆ ದೊರೆಯದ ಕಾರಣ ಈ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದಿಲ್ಲ.

6. ವಿಷಯ: ಪಾವಗಡ, ಚಳ್ಳಕೆರೆ, ಮೊಣಕಾಲ್ಮೂರು, ಸಂಡೂರು, ಹೊಸಪೇಟೆ, ಕೂಡ್ಲಿಗಿ ತಾಲ್ಲೂಕುಗಳ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಯಡಿ ಕಾಮಗಾರಿಗಳನ್ನು ಪ್ರಾರಂಭಿಸುವ ಬಗ್ಗೆ.

ಶ್ರೀ ಕೆ. ಎಂ. ತಿಮ್ಮರಾಯಪ್ಪ: ಮಾನ್ಯ ಅಧ್ಯಕ್ಷರೆ, ಉತ್ತರ ಬಂದಿಲ್ಲ.

ಅಧ್ಯಕ್ಷರು: ಉತ್ತರ ಕಳುಹಿಸಿ ಕೊಡಿ.

ಶ್ರೀ ಹೆಚ್. ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಪಾವಗಡ ತಾಲ್ಲೂಕಿನ 369 ಸಂಖ್ಯೆ ಜನವಸತಿಗಳಿಗೆ ಹಾಗೂ ಚಿತ್ರದುರ್ಗ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಚಳ್ಳಕೆರೆ, ಮೊಳಕಾಲ್ಮೂರು ತಾಲ್ಲೂಕುಗಳಿಗೆ 503 ಸಂಖ್ಯೆ ಜನವಸತಿಗಳಿಗೆ ತುಂಗಭದ್ರಾ ಜಲಾಶಯದಿಂದ ನೀರು ಪೂರೈಸಲು ಕರಡು ಯೋಜನೆಯನ್ನು